iii ಕುಂದಾಪುರ ತಾಲ್ಲೂಕಿನ ಕೋಡಿ ಎಂಬ ಕಡಲಿನಲ್ಲಿ ಸಜೀವ ಬಾಂಬೊಂದು ತೇಲಿ ಬಂದಿರುವ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಕಾಯುತಿವೆ ಬಾಂಬುಗಳು ಭೂಗರ್ಭದಲ್ಲಿ ಎಂಬ ನಾಮಾಂಕಿತದೊಂದಿಗೆ ತಾರೀಖು ೩೦-೭-೮೫ರ ಉದಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದಂತೆ, ಕುಂದಾಪುರದ 'ಕೋಡಿ' ಎಂಬಲ್ಲಿ ಕಡಲಿನಲ್ಲಿ ತೇಲಿ ಬಂದ ಸಜೀವ ಬಾಂಬೊಂದನ್ನು ಕಡಲ ತಡಿಯ ಮರಳಿನಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಹುದಿಗಿಟ್ಟಿದ್ದಾರೆ, ಅಂತೆಯೇ ಕುಂದಾಪುರ ತಾಲ್ಲೂಕಿನ ಶಿರೂರು ಸಮುದ್ರದ ಬಳಿಯಲ್ಲಿಯೂ ಇಂತಹ ಬಾಂಬು ಸಿಕ್ಕಿ ಭೂಮಿಯಲ್ಲಿ ಸಮಾಧಿಸ್ಥವಾಗಿದೆ, ಸ್ಫೋಟಕ ತಜ್ಞರನ್ನು ಕರೆಸಲಾಗಿದೆ. ಇದರ ಗುಟ್ಟು ಅರಿಯದೆ ಹಾಗೇ ತೆರಳಿದ ಕಾರಣ ಏಂಲಿಟರಿಯಂವರಿಗೆ ಕರೆ ಹೋಗಿದೆ ಎಂದು ತಿಳಿದುಬಂದಿದೆ. ಈ ಪ್ರಕರಣದಿಂದ ಕರಾವಳಿಯ ಜನತೆ ಭಯಗ್ರಸ್ಥರಾಗಿದ್ದಾರೆ. ಈ ವಿಷಯಂ ಕುರಿತು ಸರ್ಕಾರ ತುರ್ತಾ ಕ್ರಮ ಹರಿಸಬೇಕೆಂದು ಸದನದ ಮುಖೇನ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—ನಾರಾಯಣಕುಮಾರ್‌ರವರ ಕ್ಷಮೆ ಕೇಳಿ ಇಂಗ್ಲೀಷಿನಲ್ಲಿರುವ ವರದಿಯನ್ನು ಓದಬಯಸುತ್ತೇನೆ.—

"In April 1985 a cylindrical object looking like Bomb was traced floating in Sea-shore in the limits of Kodi village in Kundapur Police Station limits. On information the Police Sub-Inspector went to the spot and safely deposited near the Sea shore. Similarly another cylindrical object looking like Bomb was traced in the sea-shore in Sirur village in the limits of Byndoor Police Station. The Assistant Controller of Explosives. Mangalore, who was requested to examine them, visited the spot in April and felt that they belonged to the Navy. At his instance the Naval authorities visited the spot in April and felt that they belonged to the Navy. At his instance the Naval authorities visited the spot yesterday. According to them the Bomb like object found in in the Kodi village limit is a smoke bomb and is used for giving signal for Naval Helicopters for landing. The other Cylindrical object is a fuse which is nothing but a torpedo for shooting Air Crafts from the Naval ships. After examination, both the Cylindrical objects have been safely packed and kept in the Coondapur Police Station for being transported to Cochin."

ಶಿಕಾರಿಪುರ ತಾಲ್ಲೂಕಿನಲ್ಲಿರುವ ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೇ ಇರುವ ಬಗ್ಗೆ

ಶ್ರೀ ಬಿ.ಎಸ್. ಯಂಡಿಯೂರಪ್ಪ.—ಶಿಕಾರಿಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಘಟಕಗಳಾದ ಸುಣ್ಣದಕೊಪ್ಪ, ಹರಗಿ, ಬಳಕೆ ಸಾಲೂರು, ಕಾಗೆನಳ್ಳಿ ಮಂತ್ತು ಪ್ರಾಥಮಿಕ ಆರೋಗ್ಯ ಸೆಂಟರ್ ಆದ ಚಿಕ್ಕ ಜೋಗಿಹಳ್ಳಿ ಗ್ರಾಮಂಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೆ ಅಲ್ಲಿ ಸುತ್ತ ಮಂತ್ತ ವಾಸಿಸುವ ಜನಕ್ಕೆ ತುಂಬ ತೊಂದರೆ ಆಗಿದೆ. ಇಡೀ ತಾಲ್ಲೂಕಿನಲ್ಲಿ ಕೇವಲ ಎರಡು ಕಡೆ ಮಾತ್ರ ವೈದ್ಯಾಧಿಕಾರಿಗಳಿದ್ದಾರೆ. ಬರಗಾಲ ಪೀಡಿತ ಪ್ರದೇಶವಾದ ಹೆಚ್ಚು ಹರಿಜನ ಗಿರಿಜನರು ಕೂಲಿ ಕಾರ್ಮಿಕರು ವಾಸಿಸುತ್ತಿರುವ ಈ

ತಾಲ್ಲೂಕಿನ ಜನ ರೋಗರುಜಿನಗಳಿಗೆ ತುತ್ತಾಗಿ ನರಳುತ್ತಿರುವ ಈ ಭಾಗಕ್ಕೆ, ಕೊನೆಯ ಪಕ್ಷ ಹೆಚ್ಚು ಆರೋಗ್ಯ ಘಟಕಗಳನ್ನು ಪ್ರಾರಂಭಿಸುವುದು ಬೇಡ, ಇರುವ ಪ್ರಾಥಮಿಕ ಆರೋಗ್ಯ ಘಟಕಗಳಿಗಾದರೂ ವೈದ್ಯಾಧಿಕಾರಿಗಳನ್ನು ನೇಮಿಸದೆ ಇರುವುದು ಸರ್ಕಾರದ ನಿಷ್ಕ್ರಿಯತೆಗೆ ಉದಾಹರಣೆ ಆಗಿದೆ. ತಕ್ಷಣ ಈ ಸ್ಥಳಗಳಿಗೆ ವೈದ್ಯಾಧಿಕಾರಿಗಳನ್ನು ಇತರೆ ಸಿಬ್ಬಂದಿ ವರ್ಗದವರನ್ನು ನೇಮಿಸಬೇಕೆಂದು ಸಾರ್ವಜನಿಕ ಮಹತ್ವವಾದ ವಿಷಯದ ಬಗ್ಗೆ ಸರ್ಕಾರದ ಹೇಳಿಕೆಯನ್ನು ಬಯಸುತ್ತೇನೆ.

ಅಧ್ಯಕ್ಷರು.—ಇದು ಎಲ್ಲ ಕಡೆಗೂ ಆಗಿದೆ; ಇಡೀ ರಾಜ್ಯದಲ್ಲೇ ಈ ತೊಂದರೆ ಇದೆ.

ಶ್ರೀ ಹೆಚ್ ಎಲ್. ತಿಮ್ಮೇಗೌಡ.—(ಆರೋಗ್ಯ ಮಂತ್ರಿಗಳು) ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕದ್ದು ನಿಜ.

ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕ ವಿಚಾರ ನಿಜವಾದುದು. ಈಗಾಗಲೇ ೩೧೦ ವೈದ್ಯರುಗಳನ್ನು ಲೋಕಲ್ ಕ್ಯಾಂಡಿಡೇಟ್ಸಾಗಿ ತೆಗೆದುಕೊಂಡಿದ್ದರೂ ೨೫೦ ಜನ ವೈದ್ಯರುಗಳ ಕೊರತೆ ಇದೆ. ಈ ವರ್ಷ ೫೬ಳಿ ವೈದ್ಯರುಗಳನ್ನು ತೆಗೆದುಕೊಂಡಿದ್ದೇವೆ ಕಳೆದ ವರ್ಷ ೫೨೭ ಡಾಕ್ಟರುಗಳನ್ನು ನೇಮಕ ಮಾಡಿದ್ದೇವೆ. ೫೬ಳಿ ಜನ ಈ ವರ್ಷ ಏನು ತೆಗೆದುಕೊಂಡಿದ್ದೆವು ಅವರಲ್ಲಿ ಬಹಳ ಜನ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮಾಡುತ್ತಿದ್ದುದರಿಂದ ೧೮೦ ಜನ ರಿಪೋರ್ಟ್ ಮಾಡಿಕೊಂಡು ಒಂದು ದಿವಸ ಇದ್ದು ವಾಪಸ್ ಪಿ.ಜಿ.ಕೋರ್ಸಿಗೆ ಹೋದರು. ಅವರನ್ನು ಸೆಲೆಕ್ಟ್ ಮಾಡುವಾಗಲೇ ಕೈಬಿಟ್ಟಿದ್ದರೆ ಚೆನ್ನಾಗಿತ್ತು. ೧೮೦ ಜನ ಮಹಿಳಾ ವೈದ್ಯರನ್ನು, ೧೫೦ ಜನ ಪುರುಷ ವೈದ್ಯರನ್ನು ಮತ್ತು ೨೫ ಜನ ಹಲ್ಲಿನ ವೈದ್ಯರನ್ನು ನೇಮಕ ಮಾಡಿಕೊಡುಬೇಕೆಂದು ಪಬ್ಲಿಕ್ ಸರ್ವೀಸ್ ಕಮೀಷನ್ ಅವರನ್ನು ನಾವು ಕೇಳಿದ್ದೇವೆ. ಆದಷ್ಟು ಜಾಗ್ರತೆ ಮಾಡಿಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಮೂರು ಜನ ಡಾಕ್ಟರುಗಳಿರುವ ಕಡೆ ಇಬ್ಬರನ್ನು ಇಟ್ಟು ಇನ್ನೊಬ್ಬರನ್ನು ತೆಗೆದರೆ ೮೦ ಜನ ಸಿಗುತ್ತಾರೆ ಅವರನ್ನು ಉಪಯೋಗಿಸಿಕೊಂಡು ಎಲ್ಲೆಲ್ಲಿ ಖಾಲಿ ಜಾಗ ಇದೆ ಅಲ್ಲಿ ಹಾಕುವುದಕ್ಕೆ ಪ್ರಯತ್ನ ಪಡುತ್ತೇವೆ. ಹದಿನೈದು ದಿವಸಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಇನ್ನೊಂದು ಯೋಜನೆ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಏನೆಂದರೆ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಂಡರೆ ಅವರನ್ನು ಖಾಯಂ ಮಾಡುವುದಕ್ಕೂ ಆಗುವುದಿಲ್ಲ, ವಾಪಸ್ ಕಳುಹಿಸುವುದಕ್ಕೂ ಆಗುವುದಿಲ್ಲ. ಆದ್ದರಿಂದ ಪಿ.ಎಸ್.ಸಿ.ಯವರು ಕ್ಯಾಂಡಿಡೇಟ್ಸ್ ಸೆಲೆಕ್ಟ್ ಮಾಡಿ ಕಳುಹಿಸುವವರೆಗೆ ನಿವೃತ್ತರಾದ ಡಾಕ್ಟರುಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ. ಮೂರು ಜನ ಇರುವ ಕಡೆ ಒಬ್ಬರನ್ನು ತೆಗೆದು ಹಾಕಿದರೆ ಅಲ್ಲಿ ೮೦ ಜನ ಸಿಗುತ್ತಾರೆ. ಆದರೆ ಜೊತೆಗೆ ಮಿಕ್ಕ ಜಾಗಗಳಿಗೆ ನಿವೃತ್ತರಾದ ವೈದ್ಯರುಗಳನ್ನು ೯ ತಿಂಗಳು ಅಥವಾ ಒಂದು ವರ್ಷದ ಅವಧಿಗೆ ಅಂದರೆ ಪಿ.ಎಸ್.ಸಿ.ಯವರು ಡಾಕ್ಟರುಗಳನ್ನು ನೇಮಿಸಿ ಕಳುಹಿಸುವವರೆಗೆ ನೇಮಿಸಿಕೊಳ್ಳುವುದಕ್ಕೆ ಯೋಚನೆ ಮಾಡಿದ್ದೇವೆ.

ಅಧ್ಯಕ್ಷರು.—ಆದಷ್ಟು ಜಾಗ್ರತೆ ಈ ಕೆಲಸ ಮಾಡುತ್ತೇನೆ ಎಂದು ಅಷ್ಯೂರೆನ್ಸ್ ಕೊಡಿ.

ಶ್ರೀ ಎಚ್ ಎಲ್.ತಿಮ್ಮೇಗೌಡ.—ಆದಷ್ಟು ಜಾಗ್ರತೆ ಮಾಡುತ್ತೇವೆ. ಇನ್ನು ೧೦–೧೫ ದಿವಸಗಳಲ್ಲಿ ಮೂರು ಜನ ಇರುವ ಕಡೆ ಒಬ್ಬರನ್ನು ತೆಗೆದು;ಅವರಲ್ಲಿ ಸಿಗುವ ೮೦ ಜನರನ್ನು ನೇಮಕ ಮಾಡುತ್ತೇವೆ. ಆಯುರ್ವೇದ ಆಸ್ಪತ್ರೆಗಳಲ್ಲೂ ವೈದ್ಯರುಗಳ ಕೊರತೆ ಇದೆ. ಅಲ್ಲೂ ಕೂಡ ನೇಮಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಐದು ಜಾಗಗಳಲ್ಲಿ ಡಾಕ್ಟರುಗಳಿಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವುಗಳಲ್ಲಿ ಮೂರಕ್ಕಾದರೂ ೧೫ ದಿವಸದೊಳಗೆ ಡಾಕ್ಟರುಗಳನ್ನು ಹಾಕತಕ್ಕ ಭರವಸೆಕೊಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ರೆವಿನ್ಯೂ ಅಧಿಕಾರಿಗಳು ದಾಖಲೆಗಳನ್ನು ತಿದ್ದಿರುವ ಬಗ್ಗೆ

ಶ್ರೀ ಬಿ.ಸ್ವಾಮಿರಾವ್.—(ಹೊಸನಗರ) ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಆದರಲ್ಲೂ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಾದ್ಯಂತ ರೆವಿನ್ಯೂ ಅಧಿಕಾರಿಗಳು ದಾಖಲೆಗಳನ್ನು ತಿದ್ದಿ